# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 436 |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು ಸೇರಿದಂತೆ ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಎಷ್ಟು ಶೌಚಾಲಯಗಳಿವೆ; ಈ ಶೌಚಾಲಯಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ವಿದ್ಯಾರ್ಥಿಗಳು ಹಾಗೂ ಪೋಷಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ</td><td>ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿರುವ ಶೌಚಾಲಯಗಳ ಸಂಖ್ಯೆ ಕೆಳಕಂಡಂತಿದೆ.
<table>
<tr><th>ಜಿಲ್ಲೆಯ ಹೆಸರು</th><th>ಪ್ರಾಥಮಿಕ ಶಾಲೆಗಳಲ್ಲಿರುವ ಶೌಚಾಲಯಗಳ ಸಂಖ್ಯೆ</th><th>ಪ್ರೌಢ ಶಾಲೆಯಲ್ಲಿರುವ ಶೌಚಾಲಯಗಳ ಸಂಖ್ಯೆ</th><th>ಒಟ್ಟು</th></tr>
<tr><td>ಬಾಗಲಕೋಟೆ</td><td>2853</td><td>823</td><td>3676</td></tr>
<tr><td>ವಿಜಯಪುರ</td><td>1992</td><td>215</td><td>2207</td></tr>
<tr><td>ಒಟ್ಟು</td><td>4845</td><td>1038</td><td>5883</td></tr>
</table>
ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿರುವ ಒಟ್ಟು 46460 ಶಾಲೆಗಳ ಪೈಕಿ 41432 ಪ್ರಾಥಮಿಕ ಶಾಲೆಗಳು ಹಾಗೂ 4858 ಪ್ರೌಢ ಶಾಲೆಗಳು ಒಳಗೊಂಡಂತೆ ಒಟ್ಟಾರೆ 46290 ಸರ್ಕಾರಿ ಶಾಲೆಗಳಲ್ಲಿ ಶೌಚಾಲಯವಿರುತ್ತದೆ.</td></tr>
<tr><td>ಆ)</td><td>ಸದರಿ ಶಾಲೆಗಳಲ್ಲಿ ಶೌಚಾಲಯಗಳಲ್ಲಿ ಸ್ವಚ್ಛತೆ ಕಾಪಾಡಲು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಶಾಲೆಗಳಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ; ನೇಮಕಾತಿ ಮಾಡಿಕೊಳ್ಳದೆ ಇದ್ದಲ್ಲಿ ಕಾರಣವೇನು;</td><td>ಶೌಚಾಲಯಗಳ ಸ್ವಚ್ಛತೆಗೆ ಖಾಯಂ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ, ಆದರೆ ಶಾಲೆಗೆ ಪ್ರತ್ಯೇಕ ನಿರ್ವಹಣಾ ಅನುದಾನ ಲಭ್ಯವಿದ್ದು ಸಂಭಾವನೆ ಆಧಾರದ ಮೇಲೆ ಸ್ಥಳೀಯವಾಗಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗುತ್ತಿದೆ. ಹಾಗೂ ಶಾಲಾ ಸ್ವಚ್ಛತೆಯನ್ನು ಕಾಪಾಡಲು ಸಿಬ್ಬಂದಿಯನ್ನು ಕೆಲವು ಗ್ರಾಮ ಪಂಚಾಯತಿ ವತಿಯಿಂದ ಎರವಲು ಸೇವೆಯನ್ನು ಪಡೆಯಲಾಗುತ್ತಿದೆ.</td></tr>
<tr><td>ಇ)</td><td>ರಾಜ್ಯದಲ್ಲಿರುವ ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಹಾಗೂ ಶೌಚಾಲಯ ಇರುವುದಿಲ್ಲ ಹಾಗೂ ಕುಡಿಯುವ ನೀರು, ಶೌಚಾಲಯಗಳ ಸೌಲಭ್ಯ ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?(ಮಾಹಿತಿ ನೀಡುವುದು)</td><td>ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳ ಕೊರತೆಯ ಮಾಹಿತಿ ಈ ಕೆಳಕಂಡಂತಿದೆ.
<table>
<tr><td>ಕುಡಿಯುವ ನೀರಿನ ವ್ಯವಸ್ಥೆ ಕೊರತೆ ಇರುವ ಶಾಲೆಗಳ ಸಂಖ್ಯೆ</td><td>61</td></tr>
<tr><td>ಶೌಚಾಲಯ ಕೊರತೆ ಇರುವ ಶಾಲೆಗಳ ಸಂಖ್ಯೆ</td><td>170</td></tr>
</table></td></tr>
</table>

- ಕಳೆದ ಮೂರು ವರ್ಷಗಳಲ್ಲಿ ಶೌಚಾಲಯ ನಿರ್ಮಾಣ ಹಾಗೂ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

**ಶೌಚಾಲಯ ನಿರ್ಮಾಣ:**

(ರೂ.ಲಕ್ಷಗಳಲ್ಲಿ)

| **ವರ್ಷ** | **ಶೌಚಾಲಯಗಳ ಸಂಖ್ಯೆ** | **ಬಿಡುಗಡೆಯಾದ ಅನುದಾನ** |
|---|---|---|
| 2022-23 | 1168 | 3500.00 |
| 2023-24 | 3804 | 8000.00 |
| 2024-25 | 2747 | 11414.00 |
| ಒಟ್ಟು | 7719 | 22914.00 |

ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ವಹಣೆ: (ರೂ.ಲಕ್ಷಗಳಲ್ಲಿ)

| **ವರ್ಷ** | **ಬಿಡುಗಡೆಯಾದ ಅನುದಾನ** |
|---|---|
| 2022-23 | 3495.52 |
| 2023-24 | 7122.00 |
| 2024-25 | 5798.32 |
| ಒಟ್ಟು | 16415.84 |

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ಕಳೆದ 02 ವರ್ಷಗಳಲ್ಲಿ ಕೈಗೆತ್ತಿಕೊಂಡ ಶೌಚಾಲಯ ಮತ್ತು ಕುಡಿಯುವ ನೀರು ಕಾಮಗಾರಿಗಳ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ವರ್ಷ | ಯೋಜನೆಯ ಹೆಸರು | ಕುಡಿಯುವ ನೀರು | | ಶೌಚಾಲಯ | |
|---|---|---|---|---|---|
| | | ಭೌತಿಕ | ಬಿಡುಗಡೆಯಾದ ಅನುದಾನ | ಭೌತಿಕ | ಬಿಡುಗಡೆಯಾದ ಅನುದಾನ |
| 2023-24 | ಪಿ.ಎ.ಬಿ | - | - | 205 | 599.05 |
| 2024-25 | ಪಿ.ಎ.ಬಿ | 03 | 6.00 | - | - |

**ಇಪಿ 62 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**